**ಓ.ಎಸ್.ನಂ.47-2019**
**ಪಿ.ಡಬ್ಲ್ಯೂ -1.**

**ದಿಃ 15-10-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ಃ ವಾದಿ ಪರ ವಕೀಲರಿಂದ.**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ನನ್ನ ಸ್ವಂತ ಮಾಹಿತಿ ಮೇರೆಗೆ ಹೇಳಿ ಬರೆಸಿದ್ದು ಅವು ಸತ್ಯವಾಗಿರುತ್ತವೆ. ಪ್ರಮಾಣಪತ್ರದಲ್ಲಿನ ಸಂತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಸಾಕ್ಷಿಯು ಹಾಜರುಪಡಿಸಿರುವ ದಿ.19.10.1978 ರಂದು ಎಲ್ಎನ್.ಡಿಪಿಆರ್ 59/78-79 ರಲ್ಲಿ ತರೀಕೆರೆ ತಾಲ್ಲೂಕು ತಹಸೀಲ್ದಾರರು ಮಾಡಿರುವ ಆದೇಶದ ದೃಢೀಕೃತ ನಕಲನ್ನು ನಿ-ಪಿ-1 ಎಂದು, ಗ್ರಾಂಟ್ ಸರ್ಟಿಫಿಕೇಟ್ನ ದೃಢೀಕೃತ ನಕಲನ್ನು ನಿ-ಪಿ-2 ಎಂದು, ಸಾಗುವಳಿ ಚೀಟಿ ರಿಜಿಸ್ಟರ್ನ ದೃಢೀಕೃತ ನಕಲನ್ನು ನಿ-ಪಿ-3 ಎಂದು, 20 ಪಹಣಿ ಪತ್ರಿಕೆಗಳನ್ನು ನಿಪಿ-4 ರಿಂದ ನಿಪಿ-23 ಎಂದು ಗುರುತಿಸಲಾಯಿತು. ಮ್ಯುಟೇಷನ ರಿಜಿಸ್ಟರ್ ನ್ನು ನಿಪಿ-24 ಎಂದು, ಎರಡು ಋಣಭಾರ ರಾಹಿತ್ಯ ಪ್ರಮಾಣಪತ್ರಗಳನ್ನು ನಿಪಿ-25 ಮತ್ತು ನಿಪಿ-26 ಎಂದು, ಮೆಸ್ಕಾಂ ನವರು ಕೊಟ್ಟಿರುವ ವರದಿಯನ್ನು ನಿ-ಪಿ-27 ಎಂದು, ಎರಡು ತೆರಿಗೆ ಪಾವತಿ ರಶೀದಿಗಳನ್ನು ನಿಪಿ-28 ಮತ್ತು ನಿಪಿ-29 ಎಂದು, ಲಿಂಗದಹಳ್ಳಿ ಪೋಲೀಸ್ ಠಾಣೆಯವರು ಕೊಟ್ಟಿರುವ ಸ್ವೀಕೃತಿ ಮತ್ತು ಹಿಂಬರಹವನ್ನು ನಿಪಿ-30 ಮತ್ತು ನಿಪಿ-31 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾ.ದಂ. ರವರು, ತರೀಕೆರೆ.